

ನಾಮ್ಚಿಯಲ್ಲಿನ ದೇವಾಲಯ (ಸಿಕ್ಕಿಂ)

ಇಂಟರ್‌ನೆಟ್ ಚಿತ್ರ

ಡಾರ್ಜಿಲಿಂಗ್‌ನ ಪ್ರಖ್ಯಾತ ಟ್ರಾಯ್ ಟ್ರೈನ್ ಸಂಪೂರ್ಣ ವೃತ್ತಾಕಾರದಲ್ಲಿ ಚಲಿಸುತ್ತದೆ. ವೃತ್ತಾಕಾರದ ರೈಲ್ವೆ ಹಳಿಯ ಮಧ್ಯದಲ್ಲಿ ತುಂಬಾ ವಿಶಾಲವಾದ ಜಾಗವಿದ್ದು, ಸುಂದರವಾದ ಪಾರ್ಕ್ ನಿರ್ಮಿಸಿದ್ದಾರೆ. ಮಧ್ಯದಲ್ಲಿ ಎತ್ತರದ ಕಲ್ಲಿನ ಕಂಬದ ರೀತಿಯಲ್ಲಿರುವ ಸ್ಮಾರಕವಿದ್ದು ಸ್ವಾತಂತ್ರ ಸಂಗ್ರಾಮದಲ್ಲಿ ಮಾಡಿದ ಗೂರ್ಖಾ ರೆಜಿಮೆಂಟ್‌ನ ಯೋಧರ ನೆನಪಿಗೆ ಮಾಡಿದಂತಹ ಸ್ಮಾರಕವಿದು.

ಡಾರ್ಜಿಲಿಂಗ್‌ನಲ್ಲಿ ಮುಖ್ಯವಾದ ಸಂಸ್ಥೆಯೆಂದರೆ, ಹಿಮಾಲಯನ್ ಮೌಂಟೆನಿಯರಿಂಗ್ ಇನ್‌ಸ್ಟಿಟ್ಯೂಟ್. ಪರ್ವತಾರೋಹಿಗಳ ಬಗೆಗಿನ ಎಲ್ಲಾ ಮಾಹಿತಿಗಳು, ಐತಿಹಾಸಿಕ ವಿವರಗಳು ಇಲ್ಲಿ ದೊರೆಯುತ್ತದೆ. ಈ ಸಂಸ್ಥೆಯು ಪದ್ಮಜಾ ನಾಯ್ಡು ಹಿಮಾಲಯನ್ ಪಾರ್ಕ್‌ನ (ಈಕೆ ಸರೋಜಿನಿ ನಾಯ್ಡು ಮಗಳು) ಒಳಗಿದೆ. ಇಲ್ಲೊಂದು ಮೃಗಾಲಯವಿದೆ. ಭಾರತದ ಅತೀ ಎತ್ತರದ ಪ್ರದೇಶದಲ್ಲಿರುವ ಮೃಗಾಲಯವಿದು. ಪ್ರತಿ ವರ್ಷ ಸರಾಸರಿ ಮೂರು ಲಕ್ಷ ಪ್ರವಾಸಿಗರು ಈ ಮೃಗಾಲಯಕ್ಕೆ ಭೇಟಿ ನೀಡುತ್ತಾರಂತೆ!

ಹಾಗೆ ನೋಡಿದರೆ ಇಲ್ಲಿ ಹೆಚ್ಚೇನೂ ಪ್ರಾಣಿಗಳಿಲ್ಲ. ಆದರೆ ಹಿಮಾಲಯನ್ ಪರ್ವತ ಶ್ರೇಣಿಯಲ್ಲಿ ಬದುಕುವಂತಹ ಹಿಮ ಚಿರತೆ, ಚಮರೀಮೃಗ, ಕಡವೆ ಮುಂತಾದ ಪ್ರಾಣಿಗಳಿವೆ. ಅದರಲ್ಲೂ ಅಳಿವಿನಂಚಿನಲ್ಲಿರುವ ಕೆಂಪು ಪಾಂಡಾಗಳನ್ನು ಇಲ್ಲಿ ಸಂರಕ್ಷಿಸಲಾಗಿದೆ.



ಥೇಮಿ ಟೀ ಪಾರ್ಕ್

ಹಿಮಾಲಯನ್ ಮೌಂಟೆನಿಯರಿಂಗ್ ಇನ್‌ಸ್ಟಿಟ್ಯೂಟ್ ಸಂಸ್ಥೆ ನಿಜಕ್ಕೂ ಅಪರೂಪದ್ದು. ಎಡ್ಮಂಡ್ ಹಿಲರಿ ಮತ್ತು ತೇನ್‌ಸಿಂಗ್ ನೋರ್ಗೆ ಮೌಂಟ್ ಎವರೆಸ್ಟ್ ಶಿಖರವನ್ನು ಏರಿದ ನೆನಪಿಗೆ 1954 ನವೆಂಬರ್ 4 ರಂದು ಈ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಅಂದಿನ ಪ್ರಧಾನಿ ಜವಹರಲಾಲ್ ನೆಹರು ಶಿಲಾನ್ಯಾಸ ಮಾಡಿದ್ದರು. ಸ್ಥಳೀಯ ಶೆರ್ಪಾ ಜನಾಂಗದ ತೇನ್‌ಸಿಂಗ್ ನೋರ್ಗೆ ಇದೇ ಸಂಸ್ಥೆಯಲ್ಲಿ ಮಾರ್ಗದರ್ಶಕರಾಗಿ, ನಿರ್ದೇಶಕರಾಗಿ ತಮ್ಮ ಜೀವಿತಾವಧಿಯ ಕೊನೆಯ ದಿನಗಳವರೆಗೆ ಸೇವೆ ಸಲ್ಲಿಸಿದ್ದಾರೆ. 1986ರ ಮೇ 5 ರಂದು ಅವರು ನಿಧನ ಹೊಂದಿದ ದಿನ ಅವರ ಅಪೇಕ್ಷೆಯಂತೆ ಅವರ ಸಮಾಧಿಯನ್ನು ಸಂಸ್ಥೆಯ ಆವರಣದಲ್ಲೇ ನಿರ್ಮಿಸಿದ್ದಾರೆ. ಅದರ ಎದುರಿಗೆ ಸಣ್ಣ ಬೆಟ್ಟದ ಮಾದರಿಯನ್ನು ರಚಿಸಿ ಅದರ ಮೇಲೆ ಅವರ ಕಲ್ಲಿನ ಪ್ರತಿಕೃತಿಯನ್ನೂ ನಿರ್ಮಿಸಿದ್ದಾರೆ.

ಇಲ್ಲೊಂದು ಮ್ಯೂಸಿಯಂ ಇದ್ದು ಎರಡು ಮಹಡಿಯನ್ನು ಒಳಗೊಂಡಿದೆ.